SC:77/2020
PW:37 CW:48

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

ಹೇಳಿಕೆ ಹಾಳೆ
ಆರ್.ಪಿ. ಸಂಖ್ಯೆ57
ನಮೂನೆ ಸಂಖ್ಯೆ4
(ಸಿವಿಲ್)

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 77/2020

| | |
|---|---|
| PW | 37 |
| CW | 48 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 11.08.2025.

| | | |
|---|---|---|
| ಸಾಕ್ಷಿಯ ಹೆಸರು | : | ನವೀನ್ ಆರ್ |
| ತಂದೆಯ ಹೆಸರು | : | ರಾಜಕೃಷ್ಣಣ್ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಎ.ಜಿ.ಎಮ್ ಬಿ.ಎಸ್.ಎನ್.ಎಲ್ ಬೆಂಗಳೂರು |
| ವಾಸಸ್ಥಳ | : | ಬೆಂಗಳೂರು |

ಮಾನ್ಯ ಸರ್ಕಾರಿ ಅಭಿಯೋಜಕರವರು ಗೌರವಾನ್ವಿತ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆಗೆ ಹಾಜರಾಗಿದ್ದು, ಸಾಕ್ಷಿದಾರರು ತಾನು ಸರ್ಕಾರಿ ಅಧಿಕಾರಿಯಾಗಿದ್ದು, ಮಾನ್ಯ ಸರ್ಕಾರಿ ಅಭಿಯೋಜಕರವರ ಗೈರು ಹಾಜರಾತಿಗೆ ಸಾಕ್ಷಿ ನುಡಿಯಲು ಅನುಮತಿ ಕೋರಿದ್ದು, ನೀಡಲಾಯಿತು.

**ಮುಖ್ಯ ವಿಚಾರಣೆಃ ಸಾಕ್ಷಿ ಸ್ವತಃ**

1. ನಾನು ಕಳೆದ ಎರಡು ವಾರಗಳಿಂದ ಬೆಂಗಳೂರಿನ ಬಿ.ಎಸ್.ಎನ್.ಎಲ್ ಸಂಸ್ಥೆಯಲ್ಲಿ ಎ.ಜಿ.ಎಮ್ ಆಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಸಂಸ್ಥೆಯ ಜನರಲ್ ಮ್ಯಾನಜೆರ್

ರವರು ನೋಡಲ್ ಆಫೀಸರ್ ಆಗಿದ್ದು, ಅವರ ಪರವಾಗಿ ಸಾಕ್ಷ್ಯ ನುಡಿಯಲು ನಾನು ಅಧಿಕಾರ ಹೊಂದಿರುತ್ತೇನೆ.

2.ದಿನಾಂಕ 22.12.2020 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಪೊಲೀಸ್ ಅಧೀಕ್ಷಕರು ಬಿ.ಎಸ್.ಎನ್.ಎಲ್ ಸಂಸ್ಥೆ ಗೆ ಮನವಿ ಸಲ್ಲಿಸಿ ಮೊಬೈಲ್ ಸಂಖ್ಯೆ 9448717955 ಗೆ ಸಂಬಂಧಿಸಿದಂತೆ ದಿನಾಂಕ 13.01.2020 ರಿಂದ 17.08.2020 ವರೆಗಿನ ಸಿ.ಡಿ.ಆರ್ ಹಾಗೂ ಸಿ.ಎ.ಎಫ್ ದಾಖಲೆಗಳನ್ನು ಒದಗಿಸುವಂತೆ ಕೋರಿರುತ್ತಾರೆ. ಅದರಂತೆ ನಮ್ಮ ಸಂಸ್ಥೆಯಿಂದ ಪೊಲೀಸರಿಗೆ ಮೇಲ್ಕಂಡ ಮೋಬೈಲ್ ಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿರುತ್ತೇವೆ. ಸಾಕ್ಷಿದಾರರು ಈಗಾಗಲೇ ಗುರುತಿಸಲ್ಪಟ್ಟ ಮೊಬೈಲ್ ಸಂಖ್ಯೆ 9448717955 ಗೆ ಸಂಬಂಧಿಸಿದ ಸಿ.ಡಿ.ಆರ್ ನ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಮುಂದುವರೆದು ನಾವು ಪೊಲೀಸರಿಗೆ ಸದರಿ ಮೊಬೈಲ್ ನ ಐ.ಡಿ. ವಿಳಾಸ ಕಳುಹಿಸದೇ ಇದ್ದರೂ ಸದರಿ ದಾಖಲೆಯಲ್ಲಿ ಅದು ನಮೂದಾಗಿರುವುದಾಗಿ ನುಡಿದಿದ್ದು ಸಾಕ್ಷಿದಾರರು ಸದರಿ ಸಿ.ಡಿ.ಆರ್ ಗಳನ್ನು ಒಪ್ಪಿಕೊಂಡ ಕಾರಣ ಅವುಗಳನ್ನು ಒಟ್ಟಾಗಿ ನಿಪಿ 63(ಎ) ಎಂದು ಗುರುತಿಸಲಾಯಿತು.

3. ಸಾಕ್ಷಿದಾರರು ನಿಪಿ 65 ಸಿ.ಡಿ. ಅನ್ನು ನಮ್ಮ ಸಂಸ್ಥೆಯಿಂದ ಪೊಲೀಸರಿಗೆ ನೀಡಿರುವುದಾಗಿ ಗುರುತಿಸಿರುತ್ತಾರೆ. ನಮ್ಮ ಸಂಸ್ಥೆಯ ದಾಖಲೆಯಂತೆ ಸದರಿ ಸಿಮ್ ಅನ್ನು ನವೀನ್ ಎನ್ ಇವರ ಹೆಸರಿಗೆ ನೀಡಿರುತ್ತದೆ. ಸಾಕ್ಷಿದಾರರು ಬಿ.ಎಸ್.ಎನ್.ಎಲ್ ಸಂಸ್ಥೆಯವರು ನೀಡಿದ ಸಿ.ಎ.ಎಫ್ ದೃಢೀಕೃತ ನಕಲು ಹಾಗೂ ಕಲಂ 65(ಬಿ) ಸರ್ಟಿಫಿಕೇಟ್ ಅನ್ನು ನೋಡಿ

ಗುರುತಿಸಿದ್ದು ಅವುಗಳನ್ನು ನಿಪಿ 75 ಮತ್ತು ನಿಪಿ 76 ಎಂದು ಗುರುತಿಸಲಾಯಿತು. ನಿಪಿ 76 ರ ಸರ್ಟಿಫಿಕೇಟ್ ಅನ್ನು ಬಿ.ಎಸ್.ಎನ್.ಎಲ್ ಸಂಸ್ಥೆಯ ಸಬಿ ಡಿವಿಷನ್ ಇಂಜೀನಿಯರ್ ಆದ ನಾಗರಾಜು ಎಂಬುವವರು ಪೊಲೀಸರಿಗೆ ನೀಡಿದ್ದು ಅವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ನಾಗರಾಜು ರವರು ಈಗ ಚೆನ್ನೈ ನ  ಬಿ.ಎಸ್.ಎನ್.ಎಲ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

**<u>ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಪಿ.ಎಸ್. ವಕೀಲರಿಂದಃ</u>**

4. ನನಗೆ ನಿಪಿ 76 ರ ದಾಖಲೆ ತಯಾರಿಸಿದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಆದರೆ ನಮ್ಮ ಕಚೇರಿಯಲ್ಲಿ ಲಭ್ಯವಿದ್ದ ದಾಖಲೆಯ ಆಧಾರದ ಮೇಲೆ ಸಾಕ್ಷ್ಯ ನುಡಿದಿರುತ್ತೇನೆ. ನಿಪಿ 76 ರ ದಾಖಲೆಯ ಬಗ್ಗೆ ಸಾಕ್ಷಿ ನುಡಿಯಲು ಹಾಗೂ ನನ್ನ ಮೇಲಾಧಿಕಾರಿಗಳು ಅವರ ಪರವಾಗಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಯಾವುದೇ ಅಧಿಕಾರ ಪತ್ರ ನೀಡಿರುವುದಿಲ್ಲ. ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುವಂತೆ ನನ್ನ ಹೆಸರಿಗೆ ನ್ಯಾಯಾಲಯದಿಂದ ಯಾವುದೇ ಸಮನ್ಸ್  ಬಂದಿರುವುದಿಲ್ಲ. ನಾನು ಬಿ.ಎಸ್.ಎನ್.ಎಲ್ ಸಂಸ್ಥೆಯ ನೋಡಲ್ ಆಫೀಸರ್ ಆಗಿರುವುದಿಲ್ಲ ಎಂದರೆ ಸರಿ.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಹೆಚ್.ಆರ್.ವಿ. ವಕೀಲರಿಂದಃ</u>**

ಶ್ರೀ ಹೆಚ್.ಆರ್.ವಿ. ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ನುಡಿದಿರುತ್ತಾರೆ.

**<u>ಮರುವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 11.08.2025 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

**ಸಹಿ/-**
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.